ಆದರೆ ಇಂತಹ ಸಿಬ್ಬಂದಿ / ಅಧಿಕಾರಿ ಮತ್ತು ಅವರ ವಾರಸುದಾರರಿಗೆ ಈ ಕೆಳಕಂಡಂತೆ ಧನ ಸಹಾಯವನ್ನು ಮಂಜೂರಿಸಲು ಸರ್ಕಾರವು ಅವಕಾಶವನ್ನು ಕಲ್ಪಿಸಿಕೊಟ್ಟಿದೆ

1) ಸರ್ಕಾರದ ಆದೇಶ ಸಂ ಒನಾಇ/353/ಪೊಸಿಇ/2001, ದಿನಾಂಕ 5-8-2003ರಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಮತ್ತು ಅಪರಾಧಗಳನ್ನು ತಡೆಗಟ್ಟುವ ಸಂದರ್ಭದಲ್ಲಿ ಮರಣ ಹೊಂದಿದ ಅಥವಾ ಗಾಯಗೊಂಡ ಸಿಬ್ಬಂದಿಗಳಿಗೆ ಪರಿಹಾರ

ಎ) ಮರಣ ಹೊಂದಿದಲ್ಲಿ ರೂ 5,00,000/-

ಬಿ) ಶಾಶ್ವತ ಅಂಗವಿಕಲತೆ ಉಂಟಾದಲ್ಲಿ ರೂ 1,00,000/-

ಸಿ) ಗುರುತರ ಗಾಯಗೊಂಡಲ್ಲಿ ರೂ 20,000/-

ಡಿ) ಸಾಧಾರಣ ಗಾಯಗೊಂಡಲ್ಲಿ ರೂ 10,000/-

2) ಸರ್ಕಾರದ ಆದೇಶ ಸಂ ಒಇ/65/ಪೊಸಿಇ/2005, ದಿನಾಂಕ 16-2-2005ರಲ್ಲಿ ನಕ್ಸಲೀಯರ ದಾಳಿಯಲ್ಲಿ ಮೃತರಾದ / ಗಾಯಗೊಂಡಲ್ಲಿ

ಎ) ಮರಣ ಹೊಂದಿದಲ್ಲಿ ರೂ 5,00,000/-

ಬಿ) ಗುಂಡೇಟಿನಿಂದ ಗಾಯಗೊಂಡಲ್ಲಿ ರೂ 1,00,000/-

ಸಿ) ಇತರೆ ರೀತಿಯ ಗಾಯಗಳಿಗೆ ರೂ 10,000/-

ಡಿ) ಅಂತಿಮವಾಗಿ ಪಡೆದ ವೇತನವನ್ನು ಅವರು ಮೃತಪಟ್ಟ ದಿನಾಂಕದಿಂದ ವಯೋನಿವೃತ್ತರಾಗುತ್ತಿದ್ದ ದಿನಾಂಕದವರೆಗೆ ನೀಡಲಾಗುವುದು ನಂತರ ಕುಟುಂಬಕ್ಕೆ ನಿಯಮಗಳ ಪ್ರಕಾರ ಲಭ್ಯವಾಗುವ ಕುಟುಂಬ ವಿಶ್ರಾಂತಿ ವೇತನವನ್ನು ಮಂಜೂರಿಸಲಾಗುವುದು

ಇ) ಮರಣ ದಿನಾಂಕದಂದು ಪಡೆಯುತ್ತಿದ್ದ ಮನೆ ಬಾಡಿಗೆ ಭತ್ಯೆಯನ್ನು ವಯೋ ನಿವೃತ್ತಿಯ ಅವಧಿಯವರೆಗೆ ನೀಡುವುದು

3) ಸರ್ಕಾರದ ಆದೇಶ ಸಂಖ್ಯೆ ಒನಾಇ/119/ಪೊಸಿಇ/2003, ದಿನಾಂಕ 27-1-04 ಮತ್ತು 13-8-04ರಲ್ಲಿ ಕರ್ತವ್ಯದ ಸಮಯದಲ್ಲಿ ಆಕಸ್ಮಿಕ ಮರಣ ಹೊಂದಿದ ಪೊಲೀಸ್ ಸಿಬ್ಬಂದಿಗಳಾದ ಹೆಚ್‌ಸಿ, ಪಿಸಿ ಮತ್ತು ವಾಲೋವರ್, ಸಿಬ್ಬಂದಿಗಳ ವಾರಸುದಾರರಿಗೆ ತಲಾ ರೂ 3,00,000/- ಗಳ ಪರಿಹಾರವನ್ನು ವಿಮಾ ಕಂಪನಿಯ ಮೂಲಕ ಮಂಜೂರಿಸಿ ಪಾವತಿಸಲಾಗುವುದು

887(1085) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಗುರುತಿಸಲಾಗಿರುವ ಪಾರಂಪರಿಕ ಸ್ಮಾರಕಗಳ ಸಂಖ್ಯೆ ಎಷ್ಟು,

ಆ) ಈ ಸ್ಮಾರಕಗಳ ಸಂರಕ್ಷಣೆ ಮತ್ತು ಉಸ್ತುವಾರಿಗಾಗಿ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳು ಯಾವುವು?

ಶ್ರೀ ಹೆಚ್ ಎಸ್ ಮಹದೇವಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ರಾಜ್ಯದಲ್ಲಿ ಸುಮಾರು 752 ರಾಜ್ಯ ಸಂರಕ್ಷಿತ ಸ್ಮಾರಕಗಳು ಇವೆ

ಆ) ಪಾರಂಪರಿಕ ಸ್ಮಾರಕಗಳ / ನಿವೇಶನಗಳನ್ನು ಪಟ್ಟಿ ಮಾಡುವ, ದಾಖಲೀಕರಣ ಮಾಡುವ ಹಾಗೂ ಇನ್‌ವೆಂಟರಿಯಿಂಗ್, ಸೈಟ್ ಮ್ಯಾನೇಜ್‌ಮೆಂಟ್ ಪ್ಲಾನ್ ಮುಂತಾದ ಕಾರ್ಯಗಳನ್ನು ಪರಂಪರೆ ಇಲಾಖೆಗೆ ಲಭ್ಯವಾಗಿರುವ ಸೀಮಿತ ಅನುದಾನದಲ್ಲಿ ನಡೆಸಲಾಗುತ್ತಿದೆ 12ನೇ ಆರ್ಥಿಕ ಅನುದಾನದ ಅಡಿಯಲ್ಲಿ ಲಭ್ಯವಾಗಿರುವ ಹಣದಲ್ಲಿ ಹಾಗೂ ಭಾರತ ಸರ್ಕಾರದ ಜೆ ಎನ್ ಎನ್ ಯು ಆರ್ ಎಮ್ ಯೋಜನೆಯಡಿ ಸ್ಮಾರಕಗಳ ಸಂರಕ್ಷಣೆ ಹಾಗೂ ನಿರ್ವಹಣೆಯನ್ನು ಮಾಡಲಾಗುತ್ತಿದೆ

ರಾಜ್ಯ ಸಂರಕ್ಷಿತ ಸ್ಮಾರಕಗಳ ಸಂರಕ್ಷಣೆ ಹಾಗೂ ನಿರ್ವಹಣೆಯು ರಾಜ್ಯ ಪುರತತ್ವ ಇಲಾಖೆಯ ಜವಾಬ್ದಾರಿಯಾಗಿದ್ದು ಈ ಕಾರ್ಯವನ್ನು ನಿರ್ದೇಶನಾಲಯಕ್ಕೆ ಲಭ್ಯವಾಗಿರುವ ಯೋಜನೆ, ಯೋಜನೇತರ ಹಾಗೂ 12ನೇ ಆರ್ಥಿಕ ಅನುದಾನದ ಅಡಿಯಲ್ಲಿ ನಿರ್ವಹಿಸಲಾಗುತ್ತಿದೆ

889(738) ಶ್ರೀ ಕೃಷ್ಣವಾಲೇಮಾರ್ ಜೆ. (ಸುರತ್ಕಲ್) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಒಟ್ಟು ಸ್ತ್ರೀಶಕ್ತಿ ತಂಡಗಳೆಷ್ಟು (ಜಿಲ್ಲಾವಾರು ವಿವರ ನೀಡುವುದು),

ಆ) ಅವುಗಳಿಗೆ ಸರ್ಕಾರ ಕಳೆದ ಎರಡು ವರ್ಷಗಳಲ್ಲಿ ನೀಡಿದ ಆರ್ಥಿಕ ನೆರವು ಎಷ್ಟು,

ಇ) 2006-07ನೇ ಸಾಲಿನಲ್ಲಿ ಎಷ್ಟು ಸ್ತ್ರೀಶಕ್ತಿ ತಂಡಗಳನ್ನು ಸೃಷ್ಟಿಸಲು ಸರ್ಕಾರ ಯೋಜನೆ ರೂಪಿಸಿದೆಯೇ,

ಈ) ಹೆಚ್ಚುವರಿ ತಂಡಗಳ ರಚನೆಗಾಗಿ ಸರ್ಕಾರ ಮೀಸಲಿಟ್ಟ ಮತ್ತು ಬಿಡುಗಡೆ ಮಾಡಿದ ಹಣದ ಮೊತ್ತ ಎಷ್ಟು,

ಉ) ಸ್ತ್ರೀಶಕ್ತಿ ತಂಡಗಳು ತಯಾರಿಸಿದ ಉತ್ಪನ್ನಗಳ ಮಾರುಕಟ್ಟೆ ವ್ಯವಸ್ಥೆಗಾಗಿ ಜಿಲ್ಲಾ ಮಾರುಕಟ್ಟೆ ಕೇಂದ್ರ ಸ್ಥಾಪನೆಗೆ ಸರ್ಕಾರ ಕೈಗೊಂಡ ಕ್ರಿಯಾ ಯೋಜನೆಗಳು ಯಾವುವು?